


## ದೇಶಪ್ರೇಮ ಬದಲು ಕಾಸುಪ್ರೇಮ!

ಬಿ.ಎಂ.ಹನೀಫ್ ಅವರ 'ಕ್ರಿಕೆಟ್ ಬಜಾರ್' ಮುಖಪುಟ ಲೇಖನದಲ್ಲಿ 'ದೇಶಪ್ರೇಮ'ದ ಜಾಗದಲ್ಲಿ 'ಕಾಸು ಪ್ರೇಮ' ಬಂದು ಕುಳಿತಿರುವುದನ್ನು ವಿಶ್ಲೇಷಿಸಿರುವುದು ಅರ್ಥಪೂರ್ಣವಾಗಿದೆ.

-ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಎಸ್.ಲಕ್ಷ್ಮಿನರಸಿಂಹ, ಚಾಮರಾಜನಗರ/ ಜೆ.ಬಿ.ಕಟ್ಟಿ, ವಿಜಾಪುರ/ ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

## ಪೂರ್ವಜರ ತಂತ್ರಜ್ಞಾನ

ಸ್ವರೂಪನಂದ ಎಂ. ಕೊಟ್ಟೂರು ಅವರ 'ನೈಸರ್ಗಿಕ ಫ್ರಿಜ್‌ಗಳು' ಲೇಖನ ನಮ್ಮ ಪೂರ್ವಜರ ಶ್ರೇಷ್ಠ ಬುದ್ಧಿಮತ್ತೆಯನ್ನು ಸಾರುವಂತಿತ್ತು.

-ಎಂ. ಸರ್ದಾರ್, ಅರಸೀಕೆರೆ

## ತಿಳಿವಳಿಕೆ ಮೂಡಿಸಿದ ಬರಹ

ಲಾವಣ್ಯ ಗೌರಿ ವೆಂಕಟೇಶ್‌ರ ಲೇಖನ 'ಮನೆಯಿಂದ ಕೆಲಸ ಎಷ್ಟು ಸುರಕ್ಷಿತ' ತಿಳಿವಳಿಕೆ ಮೂಡಿಸುವಲ್ಲಿ ಒಳ್ಳೆಯ ಪಾತ್ರ ವಹಿಸಿದೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ

## ಪರಿಸರ, ಪ್ರಾಣಿ ಪ್ರೀತಿ ಶ್ಲಾಘನೀಯ

'ಆನೆ ಸಾಕಿದವಳು!' (ಮಾಲತಿ ಭಟ್) ಓದಿದೆ. ಚೆನ್ನಾಗಿದೆ. ಹಣ-ಐಶಾರಾಮಿಯೇ ಮುಖ್ಯವೆಂದು ಹೊರಟಿರುವ ಇಂದಿನ ಅಧ್ವಾನ ಕಾಲದಲ್ಲಿ ಪ್ರಜ್ಞಾ ಚೌಟರಂಥ ಮಹಿಳೆ ಪರಿಸರ ಮತ್ತು ಪ್ರಾಣಿ ಪ್ರೀತಿಗಾಗಿ ನಗರವನ್ನೇ ತ್ಯಜಿಸಿ ಕಾಡಿಗೆ ಹೋಗಿ ವಾಸವಾಗಿರುವುದು ಅಚ್ಚರಿಯ ಸಂಗತಿ! ಬರೀ ಅಚ್ಚರಿಯಲ್ಲ, ಇಂದಿನ ಯುವ ಜನಾಂಗಕ್ಕೆ ಸ್ವಾಗತಾರ್ಹ. ಸಕಾರಾತ್ಮಕ ಸಂದೇಶ ನೀಡಿದ ಸಂಗತಿ.

-ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ/ ಎಚ್.ಆನಂದಕುಮಾರ್, ಚಿತ್ರದುರ್ಗ

## ಉಪಯುಕ್ತ ಮಾಹಿತಿ

ಸುಧಾ ಹೆಗಡೆಯವರ 'ಸಪೂರ ದೇಹಕ್ಕೆ ಅರೋಮ ಚಿಕಿತ್ಸೆ' ಲೇಖನ ಉಪಯುಕ್ತವೆನಿಸಿತು. ಜಾಹೀರಾತಿಗೆ ಮರುಳಾಗಿ ಹಣ ಕಳೆದುಕೊಳ್ಳುವ ಜನರಿಗೆ ನಿಜ ಸಂಗತಿಗಳು ಗೊತ್ತಿರುವುದಿಲ್ಲ.

-ರಾಜಶೇಖರ ಗೌಡ, ಕೊಟ್ಟೂರು

## ಪಟ್ಟಣ ವಲಸೆ: ಎಚ್ಚರಿಕೆ

ಪಟ್ಟಣ ಜೀವನಕ್ಕೆ ಮಾರುಹೋಗುತ್ತಿರುವುದರ ಅಪಾಯದ ಕುರಿತು ವಿಚಾರ ಲಹರಿಯ 'ವಲಸೆ ಹೋಗುವ ಪ್ರವೃತ್ತಿ' ಲೇಖನದಲ್ಲಿ ವೈನತೇಯ ಎಚ್ಚರಿಸಿದ್ದಾರೆ.

- ಜಿ.ಕೆ.ಶ್ರೀಮತಿ, ಬೆಂಗಳೂರು

## 'ವೈ-ಚಾರಿ'ಕತೆ

'ವಾಮಾಚಾರ' ಬಗೆಗಿನ ವೈ-ಚಾರಿ ಲೇಖನ ಚಿಂತನಾರ್ಹವಾಗಿತ್ತು. ಅಮಾಯಕ ಮುಗ್ಧರು ಮತ್ತು ಮಾನಸಿಕ ನಿಶ್ಶಕ್ತರು ವಾಮಾಚಾರದ ಬಲೆಗೆ ಸುಲಭವಾಗಿ ಸಿಕ್ಕಿ ಬೀಳುತ್ತಾರೆ. ಇಂತಹ ಲೇಖನಗಳು ಸ್ವಾಗತಾರ್ಹ.

-ಎ.ಕೆ. ಪಟ್ಟಾಭಿ, ಬೆಂಗಳೂರು

## 'ಅನಾಯಾಸ'ವಾಗುವ 'ಪ್ರಯಾಸ'

ಎನ್.ಎಸ್. ಶಾರದರ 'ಯೋಸ್ಮಿಟಿ ನ್ಯಾಷನಲ್ ಪಾರ್ಕ್' ಚೆನ್ನಾಗಿ ಓದಿಸಿಕೊಂಡಿತು. ಚಿತ್ರಗಳು ಆಕರ್ಷಕವಾಗಿದ್ದವು. ಪ್ರವಾಸ ಅಂಕಣವು ಮನದ 'ಪ್ರಯಾಸ'ವನ್ನು 'ಅನಾಯಾಸ'ಗೊಳಿಸುವುದೆಂದರೆ ತಪ್ಪಾಗಲಾರದು.

-ನೆ.ಲ. ರಾಂ, ಬೆಂಗಳೂರು

## ಮಾರ್ಮಿಕ ಕಥೆ

'ಸತ್ಯಮ್ಮಳ ಗಂಡ ಸದಣ್ಣನ ಆ್ಯಕ್ಸಿಡೆಂಟ್'ಶಿ.ಜು.ಪಾಶರ ಕಥೆ ಚೆನ್ನಾಗಿತ್ತು, ಮಾರ್ಮಿಕವಾಗಿತ್ತು.

-ಬಿ.ಎಸ್.ಮುಳ್ಳೂರ, ಹಲಗತ್ತಿ

## ಮತ್ತೆ ಕಾಣಿಸಿಕೊಂಡ ಲೇಖನ

'ಸುಧಾ' ಜ. 20 ರಂದು ಪ್ರಕಟವಾದ ಡಾ.ನಿರಂಜನ ವಾನಳ್ಳಿಯವರ 'ಸಲಾಲದಲ್ಲಿ ಒಂಟೆ ರೇಸ್' ಲೇಖನ ಈ ಹಿಂದೆ ಉದಯವಾಣಿಯಲ್ಲಿ ಪ್ರಕಟವಾಗಿದೆ!

ಲೇಖಕರು ತಮ್ಮದೇ ಲೇಖನಗಳನ್ನು ಬೇರೆ ಬೇರೆ ಪತ್ರಿಕೆಗಳಿಗೆ ಕಳುಹಿಸುವ ಮೂಲಕ ಓದುಗರು ಮತ್ತೆ ಮತ್ತೆ ಅದನ್ನೇ ಓದುವಂತೆ ಒತ್ತಾಯ ಹೇರುತ್ತಿದ್ದಾರೆ. ಕೃತಿಚೌರ್ಯದ ಬಗ್ಗೆ ಪಾಠ ಹೇಳಬೇಕಾದ ಮೇಷ್ಟ್ರೇ ಹೀಗಾದರೆ, ಉಳಿದವರ ಪಾಡೇನು?

-ವಿಶ್ವನಾಥ, ಕೊಪ್ಪ

## ಸುಧಾ fly mobile ರಸಪ್ರಶ್ನೆ ಮೂರನೆ ಡ್ರಾದ ಬಹುಮಾನ ವಿಜೇತರು

1. ಜಿ.ಶಾರದಾ ಉತ್ತಂಗಿ- ಹೂವಿನ ಹಡಗಲಿ ತಾ, ಬಳ್ಳಾರಿ ಜಿಲ್ಲೆ
2. ವೈ.ಎಚ್. ತೆಲಗಿ- ಕೇಶವಾಪುರ, ಹುಬ್ಬಳ್ಳಿ
3. ದತ್ತಾತ್ರೇಯ ಬಿ.ಸೂಗೂರ- ಬ. ಬಾಗೇವಾಡಿ, ವಿಜಾಪುರ
4. ಫಿರೋಜ್ ಶಿರೋಟಗಿ- ತಾಳಿಕೋಟೆ, ವಿಜಾಪುರ ಜಿಲ್ಲೆ
5. ಪುನೀತ್ ಕುಮಾರ್ ಕೊಣ್ಣೂರು- ಕೊಂಗವಾಡ, ಧಾರವಾಡ ಜಿಲ್ಲೆ
6. ಮಲ್ಲಿಕಾರ್ಜುನ ಎಸ್.ಗುತ್ತೇದಾರ- ಶಹಾಪುರ, ಯಾದಗಿರಿ ಜಿಲ್ಲೆ
7. ಮಹೇಶ ಕುಮಾರ್- ಜ್ಯೋತಿನಗರ, ಮೈಸೂರು
8. ರಮೇಶ್- ಕುಂಬಾರ ಕೊಪ್ಪಲ್, ಮೈಸೂರು
9. ನಯನ ಎಚ್.ಗೌಡ- ಬೆಳ್ತಂಗಡಿ, ದಕ್ಷಿಣ ಕನ್ನಡ ಜಿಲ್ಲೆ
10. ಎ.ಎಸ್. ಪಾತರಾಜು- ಅರಯೂರು, ತುಮಕೂರು




ಕೇರಳದ ಮಾಂತ್ರಿಕ ಜ್ಯೋತಿಷ್ಯರು ॐ ✝ ☪

ಕೇರಳದ ಮಳಿಯಾಳಿ ಕುಟ್ಟಿಚ್ಚಾತನ್‌ನಿಂದ ಶೀಘ್ರ ಪರಿಹಾರವಿದೆ.

ಹಲವಾರು ವರ್ಷಗಳಿಂದ ಪ್ರಸಿದ್ಧಿ ಪಡೆದಿರುವ ಇವರು ನಿಮ್ಮ ಭವಿಷ್ಯವನ್ನು ಹಸ್ತ, ಜಾತಕ, ರಾಶಿ ಪ್ರಶ್ನೆ, ಅಷ್ಟಮಂಗಳ ಪ್ರಶ್ನೆಯಿಂದ ತಿಳಿಸುತ್ತಾರೆ. ಉದಾ: ವಿದ್ಯೆ, ಉದ್ಯೋಗ, ವ್ಯಾಪಾರ, ವಿವಾಹ, ಸ್ತ್ರೀ ಪುರುಷ ವಶೀಕರಣ, ಮಾನಸಿಕ ಚಿಂತೆ, ಸಾಲದ ಬಾಧೆ, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಆರೋಗ್ಯ, ಮಾಟ ಕೃತಿಮ, ಬ್ರಹ್ಮ ಪಿಶಾಚಿಗಳಿಗೆ ಹಾಗೂ ಇನ್ನಿತರ ನಿಮ್ಮ ಯಾವುದೇ ರೀತಿಯ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕಾಗಿ ಸಂಪರ್ಕಿಸಿ:

ವಿಳಾಸ: ಎಸ್. ಪೊದುವಾಳ್, ಕಾರ್ಲ ಟವರ್ಸ್, 1ನೇ ಮಹಡಿ, ಮಣ್ಣಗೋಪುರ ಬಳಿ ಮುಖ್ಯರಸ್ತೆ, ಕಾರ್ಕಳ (ದ.ಕ.)

ಪ್ರತಿ ತಿಂಗಳು ದಿ. 10 ರಿಂದ 13ರವರೆಗೆ ಹಾಸನದಲ್ಲಿ ಸಂಪರ್ಕಿಸಬಹುದು.

ಮೊ: 98445 54918, 94493 87974
ದೂರವಾಣಿ ಮುಖಾಂತರವು ವಿವರಗಳನ್ನು ಪಡೆಯಬಹುದು

ವಿ.ಸೂ.: ಸ್ತ್ರೀ-ಪುರುಷ ವಶೀಕರಣಕ್ಕೆ, ಗಂಧರ್ವ ಸಂಮ್ಮೋಹಿನಿ ಯಂತ್ರವನ್ನು ಮಾಡಿಕೊಡಲಾಗುವುದು.